ಸೃಜನಿ

SRUJANI: Indian Journal of Innovative Research and Development (SIJIRD)
Volume-1 Issue 3, July-August 2022, Pp. 59-69
Bi-Monthly, Peer-Reviewed, Open Access, Indexed Journal

ISSN: 2583-3510

SIRDF JOURNALS
editor@srujani.in
www.srujani.in

# ಹರದೇಶಿ–ನಾಗೇಶಿ ಸಾಹಿತ್ಯ : ಮಹಿಳಾ ಅಸ್ತಿತ್ವ

**ಸರೋಜನಿ ಬಾಪುರಾಯ ಕೋಟ್ಯಾಳ***

*ಸಂಶೋಧನಾ ವಿದ್ಯಾರ್ಥಿ, ಮಹಿಳಾ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ಹೊಸಪೇಟೆ, ವಿಜಯನಗರ ಜಿಲ್ಲೆ.

***Abstract:***

*ಕನ್ನಡ ಜನಪದ ಸಾಹಿತ್ಯವನ್ನು ಅವಲೋಕಿಸುತ್ತಾ ಸಾಗಿದರೆ ಮಹಿಳಾ ಅಸ್ತಿತ್ವವನ್ನು ನಿರಾಕರಿಸುವ ಅಂಶಗಳೆ ದೊರೆಯುತ್ತವೆ. ಸಾಮಾಜಿಕ ಮತ್ತು ಸಾಂಸ್ಕೃತಿಕ ಸ್ಥಿತಿಗೆ ಹೊಂದಾಣಿಕೆ ಮಾಡಿಕೊಂಡು ಜೀವನ ನಡೆಸಿದರೆ ಮಾತ್ರ ಸುಸಂಸ್ಕೃತಳೆಂದು ಹೇಳುವ ಜನಪದ ಸಾಹಿತ್ಯ ಕಂಡುಬರುತ್ತದೆ. ಇದನ್ನು ಹೊರೆತುಪಡಿಸಿದರೆ ಲಿಂಗ ಸಮಾನತೆ, ಮಹಿಳಾ ಅಸ್ತಿತ್ವ, ಸ್ತ್ರೀಪರ ಚಿಂತನೆ ಕುರಿತಾಗಿ ಜನಪದ ಸಾಹಿತ್ಯ ಕಂಡುಬರುವುದು ಕಡಿಮೆ. ಕಂಡು ಬಂದರೂ ಕೂಡ ದೊಡ್ಡ ಪ್ರಮಾಣದಲ್ಲಿ ಇಲ್ಲ. ಹೀಗಾಗಿ ಇಂತಹ ಪ್ರಯತ್ನದ ಭಾಗವಾಗಿ ಪ್ರಸ್ತುತ ಅಧ್ಯಯನ ಅಧ್ಯಯದಲ್ಲಿ ಜನಪದ ಸಾಹಿತ್ಯದಲ್ಲಿ ದೊರೆಯುವ ಹರದೇಶಿ–ನಾಗೇಶಿ ಪರಂಪರೆಯ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಲಾಗಿದೆ.*

***Keywords:*** *ಮಹಿಳಾ ಅಸ್ತಿತ್ವ, ಲಿಂಗ ಸಮಾನತೆ, ಹರದೇಶಿ–ನಾಗೇಶಿ ಸಾಹಿತ್ಯ, ಕನ್ನಡ ಸಾಹಿತ್ಯ.*

## ಪೀಠಿಕೆ

ಸಮಾಜದಲ್ಲಿನ ಪುರುಷಾಧಿಕಾರದ ಚಟುವಟಿಕೆ ಕಾರಣಕ್ಕಾಗಿ ಇವತ್ತಿಗೂ ಸ್ತ್ರೀವಾದವನ್ನು ಸ್ವತಃ ಮಹಿಳೆಯರಿಗೆ ತಲುಪಿಸುವುದು, ಮನನ ಮಾಡಿಸುವುದು ಕಷ್ಟ ಸಾಧ್ಯವಾಗಿದೆ. ಪುರುಷಾಧಿಕಾರದ ಚಟುವಟಿಕೆಯಿಂದ ಮಹಿಳೆಯರು 'ಫೆಮಿನೈಸ್' ಆಗುವುದಕ್ಕಿಂತ ಸುಲಭವಾಗಿ 'ಅಂಟಿ ಫೆಮಿನೈಸ್' ಆಗುತ್ತಿದ್ದಾರೆ. ಹೀಗಾಗಿ ಸ್ತ್ರೀವಾದಿ ವಿರೋಧಿ ಚಟುವಟಿಕೆಯನ್ನು ಗುರುತಿಸಿಕೊಳ್ಳುವುದು, ಗ್ರಹಿಸುವುದು, ಪ್ರತಿಕ್ರಿಯಿಸುವುದು ಮತ್ತು ಪ್ರತಿರಾಜಕಾರಣಕ್ಕಾಗಿ ಚಿಂತಿಸುವುದು ಕಷ್ಟಸಾಧ್ಯವಾಗಿದೆ. ಹೀಗಿದ್ದರೂ ಕೂಡ, ಸ್ತ್ರೀವಾದವು ಮಹಿಳಾ ಅಸ್ತಿತ್ವ ಕುರಿತಂತೆ, ಲಿಂಗ ಸಮಾನತೆ ಕುರಿತಂತೆ, ಸ್ತ್ರೀಪರ ಚಿಂತನೆ ಕುರಿತಂತೆ ಗುರುತಿಸುವ ಕೆಲಸವನ್ನು ಮಾಡುತ್ತಲೆ ಇದೆ.

## ಪ್ರಸ್ತುತ ಅಧ್ಯಾಯನ ಉದ್ದೇಶ

ಹರದೇಶಿ–ನಾಗೇಶಿ ಪರಂಪರೆಯ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳಾದ ಮಹಿಳಾ ಅಸ್ತಿತ್ವ, ಲಿಂಗ ಸಮಾನತೆ, ಪುರುಷ/ಪಿತೃಪ್ರಧಾನ ಮೌಲ್ಯಗಳ ನಿರಾಕರಣೆ, ಶ್ರೇಷ್ಠ–ಕನಿಷ್ಠತೆಗಳ ನಿರಾಕರಣೆ ಹೀಗೆ ಸ್ತ್ರೀವಾದಿ ಗುರುತಿಸುವ ಸಮಾನತೆಯ ನೆಲೆಗಳನ್ನು ಶೋಧಿಸುವ ಕೆಲಸವನ್ನು ಈ ಅಧ್ಯಯನದಲ್ಲಿ ಮಾಡಲಾಗಿದೆ.

## ಅಧ್ಯಯನದ ವಿಧಾನ ಮತ್ತು ವ್ಯಾಪ್ತಿ

ಈ ಅಧ್ಯಯನವನ್ನು ಹರದೇಶಿ–ನಾಗೇಶಿ ಸಾಹಿತ್ಯವನ್ನು ಆಧಾರಿಸಿ ಈಗಾಗಲೇ ನಡೆದಿರುವ ಅಧ್ಯಯನಗಳು ಹಾಗೂ ಪ್ರಕಟವಾಗಿರು ಆಕರಗಳನ್ನು ಬಳಸಿಕೊಂಡು, ವಿಶ್ಲೇಷಣಾ ಮಾದರಿಯನ್ನು

***Please cite this article as:*** ಸರೋಜನಿ ಬಾಪುರಾಯ ಕೋಟ್ಯಾಳ. (2022). ಹರದೇಶಿ–ನಾಗೇಶಿ ಸಾಹಿತ್ಯ: ಮಹಿಳಾ ಅಸ್ತಿತ್ವ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 1(3), 59–69.

ಆಧರಿಸಿ ಪ್ರಸ್ತುತ ಲೇಖನವನ್ನು ಕಟ್ಟಲಾಗಿದೆ. ಹರದೇಶಿ–ನಾಗೇಶಿ ಪರಂಪರೆಯ ಸಾಹಿತ್ಯ ಮೂಲದಲ್ಲಿ ಲಾವಣಿ, ಹಾಗೂ ಗೀಗಿ ಪದ್ಯಗಳಿಂದ ಹುಟ್ಟಿದ ಸಾಹಿತ್ಯ. ಈ ಸಾಹಿತ್ಯ ಉತ್ತರ ಕರ್ನಾಟಕ ಭಾಗದಲ್ಲಿ ಅತ್ಯಂತ ಜನಪ್ರೀಯಗೊಂಡ ಸಾಹಿತ್ಯ. ಇದನ್ನು ಹಾಡುಗಳ ಮೂಲಕ ಜನ ಸಾಮಾನ್ಯರಿಗೆ ತಲುಪಿಸಲಾಗುತ್ತಿದೆ. ಅನೇಕ ಜಾತ್ರೆ, ಹಬ್ಬ, ಉತ್ಸವ ಸಮಾರಂಭಗಳಲ್ಲಿ ಈ ಸಾಹಿತ್ಯ ಹೆಚ್ಚು ಪ್ರಕಟಗೊಳ್ಳುತ್ತದೆ. ಈ ಸಾಹಿತ್ಯದಲ್ಲಿ ಹೆಣ್ಣು–ಗಂಡು ಎರಡು ಭಿನ್ನ ಲಿಂಗಗಳ ಅಸ್ತಿತ್ವದ ಕುರಿತಾಗಿ ಸಾಹಿತ್ಯ ಹೊಂದಿದಾಗಿದೆ.

ಪ್ರಾರಂಭದಲ್ಲಿ ಅಂದರೆ 19ನೇ ಶತಮಾನದಲ್ಲಿ ಪ್ರಾರಂಭದಲ್ಲಿ ಸಾಹಿತ್ಯ ಸ್ವಲ್ಪ ಗಮನಿಸಿದರೆ, ಅದು ರಾಷ್ಟ್ರೀಯ ಹೋರಾಟ ಅಸ್ಪೃಶ್ಯತಾ ನಿವಾರಣೆ, ರಾಷ್ಟ್ರೀಯ ಏಕತೆ, ಭಾರತಾಂಬೆಯ ದಾಸ್ಯದ ಬಿಡುಗಡೆ ಇತ್ಯಾದಿಗಳೆಲ್ಲ ಒಂದರೊಡನೊಂದು ಹೆಣೆದುಕೊಂಡು ಬಂದಿತ್ತು. ನಂತರ ಈ ಸಾಹಿತ್ಯ ಪ್ರಚಾರ ಪಡೆದು ಬೆಳವಣಿಗೆಗೊಂಡಂತೆಲ್ಲ ಮತ್ತು ಸಾಮಾಜಿಕ ಸಂದರ್ಭಗಳನ್ನಾಧರಿಸಿ ಹೆಣ್ಣು–ಗಂಡುಗಳ ಮಧ್ಯೆ ಸೃಷ್ಠಿಗೊಂಡ ಸಂಬಂಧಗಳ ಕುರಿತಾಗಿ ಸಾಹಿತ್ಯ ಮೂಡಿ ಬಂದಿರುವುದು ಇದೆ. ಹರದೇಶಿ–ನಾಗೇಶಿ ಸಾಹಿತ್ಯ, ಲಿಂಗ ಭಿನ್ನತೆಯನ್ನಾಧರಿಸಿ ಮಾನವನ ವ್ಯಕ್ತಿಗತ, ಸ್ವಾತಂತ್ರ್ಯ ಹಾಗೂ ಸ್ವಾಭಿಮಾನಕ್ಕೆ ತಕ್ಕಂತೆ ಸ್ತ್ರೀ–ಪುರುಷರಿಬ್ಬರಿಗೆ ತಮ್ಮ ತಮ್ಮ ಅಸ್ತಿತ್ವದ ನೆಲೆಗಳಿಗೆ ಸಂಬಂಧಿಸಿದಂತೆ ಸಾಹಿತ್ಯ ಪ್ರಕಟಗೊಳಿಸುವುದು ಕಂಡುಬರುತ್ತದೆ. ಹರದೇಶಿ ಪಂಗಡದ ಸಾಹಿತ್ಯ ಪುರುಷರ ಪರವಾಗಿ ವಾದ ಮಾಡಿದರೆ ನಾಗೇಶಿ ಪಂಗಡದ ಸಾಹಿತ್ಯ, ಮಹಿಳೆಯರ ಪರವಾಗಿ ಮತ್ತು ಮಹಿಳಾ ಸ್ವಾಭಿಮಾನದ ಅಂಶಗಳನ್ನು ಪ್ರಕಟಿಸುತ್ತದೆ. ಈ ಹಿನ್ನೆಲೆಯಿಂದ ಹರದೇಶಿ–ನಾಗೇಶಿ ಪರಂಪರೆಯ ಸಾಹಿತ್ಯದಲ್ಲಿ ನಾಗೇಶಿ ಪರಂಪರೆಯ ಸಾಹಿತ್ಯ ಸೃಷ್ಟಿಸುವ ಸ್ತ್ರೀವಾದಿ ನೆಲೆಗಳನ್ನು ಇಲ್ಲಿ ದಾಖಲಿಸಿ ವಿಶ್ಲೇಷಿಸುವ ಕೆಲಸ ಮಾಡಲಾಗಿದೆ.

ಸ್ತ್ರೀವಾದವು ಮುಖ್ಯವಾಗಿ ಮಹಿಳಾ ಅಸ್ತಿತ್ವ, ಲಿಂಗ ಸಮಾನತೆ, ಪುರುಷ/ಪಿತೃಪ್ರಧಾನತೆ ನಿರಾಕರಣೆ, ಶ್ರೇಷ್ಠ–ಕನಿಷ್ಠತೆಗಳ ನಿರಾಕರಣೆಯನ್ನು ಮಾಡುತ್ತದೆ. ಜೊತೆಗೆ ಸ್ತ್ರೀ–ಪುರುಷರ ಜೀವನ ಕ್ರಮ, ನೈತಿಕ ಮೌಲ್ಯ, ಮಾನವತವಾದದ ಕಡೆ ಗಮನ ಹರಿಸುತ್ತದೆ. ಹೀಗಾಗಿ ಪ್ರಸ್ತುತ ಅಧ್ಯಯದಲ್ಲಿ ಹರದೇಶಿ–ನಾಗೇಶಿ ಪರಂಪರೆಯ ಸಾಹಿತ್ಯವನ್ನು ಸ್ತ್ರೀವಾದಿ ನೆಲೆಗಳಲ್ಲಿ ಚರ್ಚಿಸಲಾಗಿದೆ. ಇದಕ್ಕೆ ಮುಂದುವರೆದು ಗೀಗಿ ಸಾಹಿತ್ಯದಲ್ಲಿನ ಹರದೇಶಿ–ನಾಗೇಶಿ ಕುರಿತಂತೆ ದೊರೆಯುವ ಆಧ್ಯಾತ್ಮಿಕ ನೆಲೆಯ ಗೀಗಿ ಸಾಹಿತ್ಯವನ್ನು ಆಕರವಾಗಿರಿಸಿಕೊಂಡು ಇಲ್ಲಿ ಚರ್ಚೆಗೆ ಒಳಪಡಿಸಲಾಗಿದೆ.

'ಅಸ್ತಿತ್ವ' ಎನ್ನುವಂತಹದ್ದು ವ್ಯಕ್ತಿಯ 'ಇರುವಿಕೆ' 'ಗುರುತು' 'ಅನ್ಯನತೆ'ಯನ್ನು ತಿಳಿಸುವಂತಾಗಿದೆ. ಅದು 'ವ್ಯಕ್ತಿಗೆ' ಜೀವಂತಿಕೆ ಸಂಕೇತವಾಗಿ ನಿರೂಪಣೆಗೊಳ್ಳುತ್ತದೆ. ಈ ಹಿನ್ನಲೆಯಿಂದ ಇಲ್ಲಿ ಹರದೇಶಿ–ನಾಗೇಶಿ ಪರಂಪರೆಯ ಸಾಹಿತ್ಯದಲ್ಲಿ ಹೆಣ್ಣಿನ ಅಸ್ತಿತ್ವದ ಅಂಶಗಳು ಅಂದರೆ ಗಂಡೇ ಪ್ರಥಮ ಗಂಡಿನಿಂದಲೇ 'ಜಗತ್ತು' ಸೃಷ್ಟಿ, ಜೀವ, ಎನ್ನುವ ಹರದೇಶಿ ಪಕ್ಷದ ಸಾಹಿತ್ಯಕ್ಕೆ ನಾಗೇಶಿ ಪಕ್ಷದ ಸಾಹಿತ್ಯ ನೇರವಾಗಿ ಉತ್ತರಿಸುತ್ತಾ, ಹೆಣ್ಣು ಜೀವ ಸೃಷ್ಠಿಯಲ್ಲಿ ಪ್ರಥಮಳು. ಹೆಣ್ಣು ಇಲ್ಲದೆ ಇದ್ದರೆ ಈ ಜೀವ ಜಗತ್ತು ಇದ್ದಿಲ್ಲ. ಎಂದು ಮಹಿಳಾ ಅಸ್ತಿತ್ವವನ್ನು ಸಾದರ ಪಡಿಸುವ ಸಾಹಿತ್ಯ ದೊರೆಯುತ್ತದೆ. ಇದಕ್ಕೆ ನಾಗೇಶಿ ಪಕ್ಷದವರು ಗೀಗಿ ಹಾಡುಗಳು ದೊರೆಯುತ್ತದೆ.

**ಜವಾಬ್:**

***ತ್ರಿಶಕ್ತಿಯಿಂದ ತ್ರೀಮೂರ್ತಿಗಳು ಜನಿಶ್ಯಾರ ಪಸಂದ***
***ಒಳ್ಳೆ ನೇಮದಿಂದ ಕೇಲ ಈ ಸಂದ***

*ಮೊದಲು ಎಲ್ಲಿ ಇತ್ತೋ ಕಾಳಂದ ಕಂದ*

*ಬ್ರಹ್ಮ, ವಿಷ್ಣು, ರುದ್ರ ಮೂವರ ಕೆನ್ನ*

*ಮಹಾಶಕ್ತಿ, ಮಹಾದೇವಿ ಇದ್ದಾಳೋ ಮುಂದ ।ಜಿ॥*

ಹೀಗೆ ಹರದೇಶಿ ಪಕ್ಷದ ಸಾಹಿತ್ಯಕ್ಕೆ ನಾಗೇಶಿ ಪಕ್ಷದ ಸಾಹಿತ್ಯ ಉತ್ತರ ನೀಡುವುದರ ಜೊತೆಗೆ ಪೃಥ್ವಿ ನಿರ್ಮಾಣ ಮಾಡುವುದರಲ್ಲಿ ಶಿವ ಎಷ್ಟು ಸಮರ್ಥನೋ ಶಕ್ತಿಯು ಅಷ್ಟೇ ಸಮರ್ಥಳೆಂಬ ವಾದ ಮಂಡನೆ ಈ ಸಾಹಿತ್ಯದಲ್ಲಿ ಕಂಡುಬರುತ್ತದೆ. ಪೃಥ್ವಿ (ಹೆಣ್ಣು) ಹೇಗೆ ಹೆಣ್ಣಿನಿಂದ ಜೀವ ಸಂಕುಲ ಹೆಣ್ಣು ಇಲ್ಲದಿದ್ದರೆ ಜೀವ ಸಂಕುಲವೇ ಇದ್ದಿಲ್ಲ ಎನ್ನುವ ಸಾಹಿತ್ಯ ಇಲ್ಲಿ ಕಂಡುಬರುತ್ತದೆ. ಮುಂದುವರೆದು ಮೊದಲು ಯಾರು ಹೆಣ್ಣೋ-ಗಂಡೋ ಎನ್ನುವ ಪ್ರಶ್ನೆಗೆ ಸಂಬಂಧಿಸಿದಂತೆ ದೊರೆಯುವ ಸಾಹಿತ್ಯದಲ್ಲಿ ಪಿಂಡ ಮೊದಲೋ ಎನ್ ಪ್ರಾಣ ಮೊದಲೋ ಎಂಬ ಹಾಡಿನಲ್ಲಿ 'ಪಿಂಡ' ಮೊದಲು ಎಂದು ನಾಗೇಶಿ ಪಕ್ಷದ ಸಾಹಿತ್ಯ ಸಮರ್ಥಿಸಿಕೊಂಡಿರುವುದು ಕಂಡುಬರುತ್ತದೆ. ಇನ್ನು ಹರದೇಶಿ-ನಾಗೇಶಿ ಪರಂಪರೆಯ ಸಾಹಿತ್ಯದಲ್ಲಿ ಪ್ರಕೃತಿಯನ್ನು ಆಯ್ಕೆ ಮಾಡಕೊಂಡಾಗ ತಾತ್ವಿಕವಾಗಿ ಭೂಮಿ ಮತ್ತು ಬೀಜ ಯಾವುದು ಮೊದಲು ಎನ್ನುವ ಜಿಜ್ಞಾಸೆಗೆ ನಾಗೇಶಿ ಸಾಹಿತ್ಯ 'ಭೂಮಿನೆ' ಮೊದಲು ಎನ್ನುವ ವಾದ ಮಂಡನೆ ಕಂಡು ಬಂದರೆ ಹರದೇಶಿ ಸಾಹಿತ್ಯ 'ನೀರು' ಶ್ರೇಷ್ಠ ಎಂದು ವಾದಿಸುವ ಮೂಲಕ ನೀರಿನ ಅಸ್ತಿತ್ವವನ್ನು (ಪುರುಷ) ಹೇಳುವ ರೂಪಕ ಸಾಹಿತ್ಯ ಕಂಡುಬರುತ್ತದೆ. ಇದಕ್ಕೆ ಪ್ರತಿಯಾಗಿ ನಾಗೇಶಿ ಸಾಹಿತ್ಯ ನೀರು ಎಷ್ಟೇ ಪಾತಾಳದಲ್ಲಿ ಇದ್ದರೂ, 'ತಳ' ಎನ್ನುವ 'ಭೂಮಿ' ಇದ್ದೆ ಇರುತ್ತದೆ. 'ಭೂಮಿ' ಶ್ರೇಷ್ಠ ಎಂದು ಮುಂದುವರೆಸುವುದರ ಜೊತೆಗೆ ನಾಗೇಶಿ ಸಾಹಿತ್ಯ ಸಾವಿರದೆಂಟು ಬ್ರಹ್ಮಾಂಡ, ನವಖಾಂಡ ದಶಾಂತಗಳೆಲ್ಲವೂ, ನಮ್ಮ ಮಣ್ಣಿನಲ್ಲಿಯೇ ಅಡಕವಾಗಿವೆ ಓಂ ಶಿವಾಯ ನೀರ ವಸ್ತು ಸಿದ್ಧ ಸಾಧ್ಯ ವಿದ್ಯಾಧರರೆಲ್ಲ ಮಣ್ಣಲ್ಲಿ ಹುಟ್ಟಿದ್ದಾರೆ. ದೇವರೆಂದು ಪೂಜೆಗೈಯುವ ನಾರಾಯಣ, ನವನಾಥ, ಸೂರ್ಯ, ಚಂದ್ರರೆಲ್ಲ ಮಣ್ಣಲ್ಲಿ ಹುಟ್ಟಿದ್ದು ಎಂದು ನಾಗೇಶಿ-ಸಾಹಿತ್ಯ ಭೂಮಿ ಮೇಲಿನ ಕಂಚು, ಕಬ್ಬಿಣ, ಹಿತ್ತಾಳೆ ಉಕ್ಕು, ಸೀಸ್ ಅಲ್ಲದೆ ಮನುಷ್ಯನ ಉತ್ಪತ್ತಿ ಸ್ಥಿತಿಲಯ ಕೂಡ ಮಣ್ಣಲ್ಲಿ ಎನ್ನುವುದ ಆಧಾರ ಕೊಡುತ್ತದೆ. ಈ ಮೂಲಕ ಮಹಿಳಾ ಅಸ್ತಿತ್ವವನ್ನು ನಿರೂಪಿಸುತ್ತದೆ.

ನಾಗೇಶಿ ಸಾಹಿತ್ಯದಲ್ಲಿ ಹೋಮ-ಹವನ ಕ್ರೀಯಾ, ವಿಚಾರ, ಮಣ್ಣಲ್ಲಿ ವೀರ ಶೂರ, ದೀರರೆಲ್ಲರೂ ಮಣ್ಣಲ್ಲಿ ಮುಚ್ಚುವುದರಿಂದ ಧರಣಿಯೇ ಮೇಲಿನ ಮಣ್ಣು ಶ್ರೇಷ್ಠ ಒಳ್ಳೆಯ ಮಣ್ಣು ಒತ್ತಿದ್ದರೆ ಬೆಳೆಯು ಶ್ರೇಷ್ಠ ಬಿತ್ತುವುದು ಬೆಳೆಯುವುದು ಮಣ್ಣಲ್ಲಿ ಎಂದು ಹೇಳುವ ಮೂಲಕ ಹೆಣ್ಣಿನ ಶ್ರೇಷ್ಠತೆಯ ಜೊತೆಗೆ ಹೆಣ್ಣಿನ ಅಸ್ತಿತ್ವ ಈ ಜೀವ ಸಂಕುಲಕ್ಕೆ ಅಗತ್ಯ. ಹೆಣ್ಣಿನಿಂದಲೆ ಈ ಜೀವ ಉತ್ಪಾದನೆಗೆ ಆಧಾರ ಎನ್ನುವ ಸಾಹಿತ್ಯ ದೊರೆಯುತ್ತದೆ. ಇಂತಹ ಹೆಣ್ಣಿನ ಅಸ್ತಿತ್ವವನ್ನು ನಿರಾಕರಿಸಿ ಪುರುಷತ್ವವೆ ಶ್ರೇಷ್ಠ ಎಂದು ಸಾರುವ ಮೂಲಕ ಹೆಣ್ಣಿನ ಅಸ್ತಿತ್ವವನ್ನೇ 'ಮಾಯ' ವಾಗಿಸುವ ಅನೇಕ ಪ್ರಯತ್ನಗಳಿಗೆ ಉತ್ತರವಾಗಿ ಹರದೇಶಿ – ಸಾಹಿತ್ಯ ಅಷ್ಟ ಪರ್ವತ, ಸಪ್ತ ಸಮುದ್ರ ಮುಳಗ್ಯಾವ ನೀರಾಗ, ಓಂಕಾರ ಧ್ವನಿ ನಿರಾಗ ಇಷ್ಟಲದೆ ಸತ್ತರು ನೀರು ಇದ್ದರು ನೀರು ಮುತ್ತು ಮಾಣಿಕ್ಯ-ಹವಳ ನೀರಾಗ ಮೂರು ಭಾಗ ನೀರು ಒಂದು ಭಾಗ 'ಭೂಮಿ' ಎಂಬ ವೇದ ಶಾಸ್ತ್ರಗಳಿವೆಂಬ ಹರದೇಶಿ-ಸಾಹಿತ್ಯ ದೊರೆಯುತ್ತದೆ. ಇದಕ್ಕೆ ಮುಂದುವರೆದು ನಾಗೇಶಿ-ಸಾಹಿತ್ಯ ಹೆಣ್ಣಿನ ಅಸ್ತಿತ್ವ ಸಾರಲಿಕ್ಕೆ 'ಪಿಂಡ' ಎನ್ನುವ ಹೆಣ್ಣಿನ ಜೈವಿಕ ಸಂಗತಿಗಳನ್ನು ಆಧಾರವಾಗಿರಿಸಿಕೊಂಡು ಮಹಿಳಾ ಪರವಾದ ವಾದ ಮಂಡಿಸಿ ಕಂಡುಬರುತ್ತದೆ. ಇದಕ್ಕೆ ಹೀಗೆ ದೊರೆಯುತ್ತದೆ.

*'ಮೊದಲು ಪ್ರಾಣದಾಲದಲ್ಲಿ ಹುಟ್ಟಿತು ಕೇಳತೀನಿ ಇದರ ಥಳ*
*ನೀವು ಹೇಳಿ ಹೋಗರಿ ಜಳಾ ಜಳಾ।*
*ದೇಹ ಹೆಣ್ಣು ಜೀವ ಗಂಡಂತ ಹೀಂಗ ಹೇಳಿ ಹೋಗ್ಯಾರ ಯತಿಗಳು ಹಾ.ಜೀ॥ ಜೀ॥ ಸಲ್ಲು*
*ಸೋಯಂ ಬ್ರಹ್ಮ ಪರವಸ್ತು ಪ್ರಮಾತ್ಮ ಹ್ಯಾಂಗ ಹ್ಯಾಂಗ*
*ಆಯ್ತೋ ನಿರ್ಮಾಣ।*
*ನೀ ಹೇಳಿ ಹೋಗೋ ಅರ್ಜುನಾ*
*ನಾಲ್ಕು ತಿಂಗಳಿಗೆ ಪಿಂಡ ತುಂಬಕೋ ಪ್ರಾಣ್ಯಾಂಗಾಯ್ತಿರ ದರ್ಶನ ।ಜಿ॥ಜಿ।*
*ಯಾವುದರೊಳಗೆ ಜೀವ ಸೇರಿತು ತಗದು ನನಗೆ ತಿಳಿಸಗ್ಗಾ*
*ಈ ದೇಹದೊಳಗೆ ತೋರಿಸಣ್ಣಾ।*
*ಜೀವ ಇರುವುದು ಯಾವುದರೊಳಗ ಮೊದಲ್ಹೇಳು ಡಪ್ಪು ಬಾರಸಣ್ಣ ।ಜಿ॥ಜಿ।*[1]

ಹೀಗೆ 'ಪಿಂಡ' ದಲ್ಲಿ ಜೀವ ಬಂತು 'ಪಿಂಡ' ಇಲ್ಲದೆ ಹೋದರೆ ಪ್ರಾಣ ಎಲ್ಲಿತ್ತೋ ಮೊದಲು 'ಪಿಂಡ' ನಂತರ ಜೀವ /ಪ್ರಾಣ ಬಂದು ಸೇರಿದು ಇದನ್ನು ತಿಳಿಯೋ ಮೊದಲು ಎಂದು ಜವಾಬ್ ನಿಡುತ್ತಾ ಹರದೇಶಿ ಸಾಹಿತ್ಯ ಏನೇ ಹೇಳಿದರು ಹೆಣ್ಣಿಗೆ ಇರುವ ಅಸ್ತಿತ್ವದ ಕುರಿತು ಪುರುಷ ಸಮಾಜಕ್ಕೆ ತಿಳಿಹೇಳುವ ಸಾಹಿತ್ಯ ನಾಗೇಶಿ ಪಕ್ಷದಲ್ಲಿ ಕಂಡುಬರುತ್ತದೆ.

ಮಹಿಳಾ ಅಸ್ತಿತ್ವವನ್ನೇ ನಿರೂಪಿಸುವ ಮತ್ತು ಅದನ್ನೇ ಸಾಬೀತು ಪಡಿಸುವ 'ಭೂಮಿ ಮೊದಲು ಬೀಜ ಮೊದಲೋ' ಎನ್ನುವ ಸವಾಲ್–ಜವಾಬ್ ಹಾಡಿನಲ್ಲಿ ನಾಗೇಶಿ ಸಾಹಿತ್ಯದಲ್ಲಿ ಹರದೇಶಿಗೆ ಉತ್ತರ ನೀಡುವಲ್ಲಿನ ಸಾಹಿತ್ಯದಲ್ಲಿ ನೀರಾಕಾರದಾಗ ನೀರೆ ಅಂತದೀ ನೀರಿನ ತೆಳಗಿತ್ತೋ ।ಖರೆ ಹೇದಿರ ತಿಳಿದೀತೋ[2] ಎಂದು ಹೇಳುವ ನಾಗೇಶಿ – ಸಾಹಿತ್ಯ 'ಭೂಮಿ' ಹೆಣ್ಣು ಮೊದಲು ನಂತರ ನೀರು ಪುರುಷ ಎಂದು ತಾತ್ವಿಕವಾಗಿ ಉತ್ತರದ ಮೂಲಕ ಮಹಿಳಾ ಅಸ್ತಿತ್ವವನ್ನು ಪುರುಷ ಸಮಾಜದ ಮುಂದೆ ಉತ್ತರಿಸುವುದು ಹೆಣ್ಣನ್ನು ಕನಿಷ್ಠ ಎಂದು ಸಾರುವ ಈ ಸಮಾಜಕ್ಕೆ ಹೆಣ್ಣೇ 'ಶ್ರೇಷ್ಠ' ಹೆಣ್ಣಿನಿಂದಲೇ ಈ ಜಗತ್ತಿನ ಜೀವ ಸಂಕುಲ ಬೆಳೆದಿದ್ದು ಎಂದು ಹೇಳುವ ಅನೇಕ ರೀತಿಯ ಸಾಹಿತ್ಯ –ನಾಗೇಶಿ ಪಕ್ಷದವರಲ್ಲಿ ಕಂಡು ಬರುತ್ತದೆ. ಇದಕ್ಕೆ ಮತ್ತೊಂದು ಗೀಗಿ ಸಾಹಿತ್ಯದಲ್ಲಿ ಈ ರೀತಿಯಾಗಿ ದೊರೆಯುತ್ತದೆ.

*'ಗಂಡ ಹೆಚ್ಚಂತೆ ಬಂಡ ಮಾಡುವರು'*
*ಗಂಡಿಗೆ ಬೆಳೆಸುವ ಪುಂಡ ಗಂಡರು ಬಂದರೀ ಗಂಡಸರು ಹುಟ್ಟಿಲ್ಲೋ ಗಂಡೀಲಿ।*
*ನಿಮ್ಮ ಕುಂಡಿಗೆ ಹೊಡೇದಾರು ಹೆಂಡೀಲಿ।*
*ಗಮಡ ಹೆಚ್ಚಂತೆ ಬಂಡ ಮಾಡುವರೆಲ್ಲಾ ಹುಟ್ಟೀರೇನು ನೀವು ಕುಂಡೀಲಿ।ಜೀ.ಜೀ। ಪಲ್ಲ*
*ವರು: ಭೂಮಿಗ ಬಸವಣ್ಣ ಹೆಪ್ಪ ಕೊಟ್ಟಾನಂತ ಹೇಳತೀರಿ ಶಾಸ್ತ್ರದಾ।*
*ನಮ್ಮ ಗೂಡಾ ಎಂಥಾ ದುಸ್ತರಾ*
*ದ್ವಾಪರದೊಳಗೆ ಬಸವಣ್ಣ ಕರೆ ಹೇಳು ವಿಸ್ತಾರ। ಜೀ.ಜೀ॥*
*ಅದಕ ಮೊದಲು ಭೂಮಿ ಇದ್ದಿಲ್ಲವೆಂದು ಹ್ಯಾಂಗ ಆಯಿತು ಆಕಾರ*
*ನಿನ್ನೆ ಹುತ್ಯಾದ ಬಸವೇಶ್ವರ।*
*ಆಧಾರವಿಲ್ಲದೇ ಸುಳ್ಳು ಯಾಕ ಹಲಬತೀರಿ. ಫಾಳಿತು ನಿಮ್ಮ ಮಜಕೂರ*

*ಇಳ: ಭೂಮಿ ತಯ್ಯಾರಾಗೂದಕ ಬೀಜ ಬೇಂಕದ್ರ ಮೊದಲಾ।*

*ಪಂಚಬೂತ ಕೊಡಲಾರದೇ ಬ್ರಹ್ಮ ಸೃಷ್ಠಿ ಆಗಿಲ್ಲ।*

*ಪಂಚಭೂತದ ಬೀಜ ಎಲ್ಲಾ ಯಾವ ಹೇಳಬೇಕು ಕುಲ್ಲಾ।*

*ಆಕಾರಕ ಬೀಜ ಯಾವುದು*

*ಅದು ಬರೇ ಬಯಲ ರೂಪಾದೋ।*

*ಇದು ನಿನ್ನ ಜೀವಕ ತಾಪಾದೋ*

*ನಿನ್ನ ಗುರುವೀಗೆ ಕೇಳು ತಿಳಿಯಲಾರದು।*

*ಹಾಕುವುದು ಪಾಪ ಅದೋ॥ [ಜೀ.ಜೀ]*

*ನೀರೆ ನಿರಾಂಕಾರ ಇತ್ತಂದಿರಿ ನಿರ್ಬೈಲಾ*

*ನೀರಿಗೆ ಹೆಪ್ಪ ಕೊಟ್ಟವರಾ ಹೆಸರು ಹೇಳು ಖುಲ್ಲಾ।*

*ನಿಗರ್ಾಡಿ ಹಾಡಿ ನಮ್ಮದೇನು ಕಿತ್ತವದಿಲ್ಲಾ*

*ಸಿಗಬಾರದು ಸಿಕ್ಕರಿ ಬಂದು।*

*ಅಲ್ಲಿವು ಇಲ್ಲಿವು ಪದಗಳು ತಂದು*

*ಇದು ಬಿಟ್ಟು ಹೇಳತೀರಿ ಮತ್ತೊಂದು*

*ಶಿಕ್ಷಾ ಕೊಡತೀನಿ ನೀವು ಹಾಡಬಾರದೆಂದು॥ [ಜೀ.ಜೀ]*

*ನೀವು ತಿಳಿದು ನೋಡ್ರೀ ಗಾಳಿವೊಳಗ ಬೀಜಿಲ್ಲಾ।*

*ನೀರಿನೊಳಗ ಸಹಿತಾ ಇಲ್ಲದ್ದಾ ಗಂಡಿನ ಪಾಲಾ।*

*ಬೆಂಕಿಗೆ ಬೀಜ ಯಾವಲ್ಲಿ ಅದು ಹೇಳು ಮೊದಲಾ*

*ಇವು ಪಂಚಭೂತಗಳು ಐದು*

*ಐದಕ್ಕೈದು ಇಪ್ಪೈದು*

*ಪಂಚಕರಣ ನೋಡ್ರಿ ನೀವು ತೆರೆದ*

*ನಮ್ಮ ಗಿಡದೊಳಗ ಉತ್ಪತ್ತಿ ನಿಮ್ಮ ಬೀಜೆಂದು [ಜೀ.ಜೀ]*

*ವರು: ಬೀಜ ಮೊದಲಂಥ ಬೊಗಳುವ ನಾಯಿ ಬೊಗಳ್ಯಾರೋ ತಿಂಡೀಲಿ।*

*ನೀವು ಬಿದ್ದಿರಿ ಇದೇ ಕಿಂಕಲಿ।*

*ಕೂಡಸಲ್ಲ: ಗಂಡ ಹೆಚ್ಚಂತ ಬಂಡ ಮಾಡುವವರೆಲ್ಲ ಹುಟ್ಟೀರೇನು ನೀವು ಕುಂಡೀಲಿ ।ಜೀ। ಚಾಕು*

*ವರ: ನಾರದೊಳಗ ಬೀಜವಿಲ್ಲದೆ ಆ ಬೀಜ ಯಾವ ಕೊಟ್ಟಾನ*

*ಅದರಾಗ ಯ್ಯಾವ ಹೂತ್ಯಾನ।*

*ಬೀಜ ನಮಗ ಕಹಿ ಬೀಜಬ್ಯಾಡ ಇದನ್ಯಾಂವ ಬರದಿತ್ವಾನ ।ಜೀ.ಜೀ।*

*ಮೂಲ ಸೃಷ್ಠಿ ಬಾಳ ಗುಮ್ಮ ಐತಿ ಕೇಳಿರಿ ನಿಮ್ಮ ಗುರುವಿನ್ನಾ।*

*ತಿಳಿಲಾರದೆ ಬಮದೀರೋ ದೈವಾನ।*

*ಆದಿ ಪುರುಷ ಯಾವಲ್ಲಿ ಹುಟ್ಟೇದ ಹೇಳಿ ಮಾಡೋ ಗಾಯನ। [ಜೀ.ಜೀ]*

*ಇಳ: ಮೂಲ ಸ್ವಯಂ ಶಕ್ತಿ ಶಕ್ತಿಯಿಲ್ಲದೆ ಸ್ವಯಂ ನಾದಯಾವಲ್ಲಿ*

*ಆ ಶಕ್ತಿ ವಾನೆನಿಂದೆ ಗೋಲಾಕಾರ ಆ ಮೇಲಿ।*

*ಪಾಪ ಚೈತನ್ಯ ರೂಪದ ನಾದ ಹೋಗೇರ ಬೀಳುತಲಿ।*
*ಓಂ ಎಂಬುವ ನಾದ ಝುಂಕರಿಸಿ*
*ಆಕಾಶಭಾಗ ಉದುರಿಸಿ।*
*ಆಕಾಶದೊಡಲೊಳು ವಾಯು ತತ್ವ ಉದ್ಭವಿಸಿ [ಜೀ.ಜೀ]*
*ವಾಯು ತತ್ವದೊಳು ಅಗ್ನಿ ತತ್ವ ಹುಟ್ಟಿತು ಆ ಮ್ಯಾಲಿ।*
*ಎರಡನುರು ಗೋಲ ಕಡೆದು ಬಿದ್ದಾವ ಅಧೋ ಭಾಗದಲ್ಲಿ*
*ಒಂದನೇ ಗೋಲಿನಿಂದ ಭೂಮಿ ತಯ್ಯಾರಾಯಿತೋ ಹುಚ್ಚ ಪ್ಯಾಲಿ।*
*ಹಿಂಗ ತಗದ ಹೇಳಬೇಕ ಸೋಸಿ।*
*ಸಭಾ ಮಾಡುತ್ತೈತಿ ಚೌಕಾನೆ।ಇದು ಸಾಯುವಷ್ಟರ ಅನುಸರಿಸಿ।*
*ಯಾವಲ್ಲಿ ಬೆಳೆದ ಬಲಾ ಅನಿಸಿಕೊಂಡೋ ಬಿಕನಾಸಿ।  ।ಜೀ.ಜೀ।*
*ಭೂಮಿ ಬೀಜದ ನ್ಯಾಯ ಕೇಳಿ ಬಲದೀರಿ ಎಲ್ಲೆಲ್ಲಿ।*
*ಇದು ಹೌದೇನಲ್ಲಾ ಮತ್ತ ಕೇಳೋ ಪಂಡಿತರೆಲ್ಲಿ।*
*ತರಕಾರ ಇದ್ರ ಈಗ ಸದ್ದೈ ಕೇಳಿರಿ ಸಭಾದಲ್ಲಿ*
*ನಿನಗ ಕಲಿಸಿದ ಗುರುವಿನ ಕಲಿಸಿ।*
*ಪ್ರಮಾಣಾಗಲಿ ಹರದಾಸಿ।*
*ನಿಮ್ಮ ಗುರುವಿಗೆ ಮಗಾ ಇಲ್ಲಾ ನೀ ಯಾರ ಮಗಾ ಪರದೇಶಿ। ।ಜೀ.ಜೀ।*
*ವರು: ಕಂಡ ಕಂಡಲ್ಲಿ ಹೋಗಿ ಪದಗಳಬರಕೊಂಡು ಕಲ್ತ ಬಂದಿ ಝುಂಡೀಲಿ।*
*ಹೆಂಡಿ ತಿಂದ್ರೀ ನಿಮ್ಮ ಸೊಂಡೀಲಿ*
*ಕೂಡಸಲ್ಲ: ಗಂಡ ಹೆಚ್ಚಂತ್ಯಾ ಬಂಡ ಮಾಡುವವರೆಲ್ಲಾ ಹುಟ್ಟೀರೇನೂ ಕುಂಡೀಲಿ। ಜೀ।ಜೀ ಚೌಕ–2।*
*ವರು: ಕೊಕ್ಕದಾಸೆಕ್ಕಾಗಿ ಸಿಕ್ಕಾಂಗ ಬೊಗಳೂದು ಯಾಂವ ಕಲಿಸ್ಯಾನ ಹಲಕಟ್ಟಾ*
*ತಗದ ಹಾಕರೋ ಹಿಂತಾವೆಲ್ಲಾ ಚಟ।*
*ಭೀಜಿನ ಮಕ್ಕಳು ಭೂಮಿ ಮೇಲೆ ಇರಬ್ಯಾಕರಿ ಭೋಗ*
*ಮಾಡಕೋರೋ ಮಠಾ ।ಜೀ.ಜೀ।*
*ಸೀರ್ಯಾಗ ಹುಟ್ಟಿ ನಿಮ್ಮ ಸ್ಥಿತನು ಹೇಳಲಿ ಆಕಾರದಿಂದ ಆರಂಭತ*
*ಪರಬ್ರಹ್ಮ ತಾಯಿ ನಮ್ಮ ಗಟಾ।*
*ಭೂಮಿಗೆ ಬಿಟ್ಟು ಬೈಲಗಿ ತಿರತಾವ ಯಾವ ಗಂಡ ಮಕ್ಕಳತಾ ।ಜೀ.ಜಿ।*
*ಕುಂತರ ಭೂಮಿ ಬೇಕು ನಿಂತರ ಭೂಮಿ ಬೇಕು ಸತ್ತರ ಭೂಮಿ ಸಂಗಾತ ಭೂಮಿಯಲ್ಲಿ ಮಠಾ।*
*ಎಂಥಂಥವರು ಭೂಮ್ಯಾಗ ಹುಟ್ಟಿ ಭೂಮಿಗೆ ನಿಂದೆ ಆಡತಿ ಪಾಪಿಷ್ಟಾ। ಜೀ.ಜಿ।*
*ಇಳು: ಎದಿ ಮೇಲೆ ಮಲಿ ಇಟಗೊಂಡು ತಿರಂಗಾವ ಗಂಡಸಲ್ಲ*
*ಹೆಸರಿನ ಮಲಿ ಆಮಲಿಯೊಳಗ ಹಾಲಿಲ್ಲ॥ ಜೀ.ಜೀ।*
*ನಮ್ಮ ಹಾಲು ಕಉಡಿಯದೇ ನೀವು ಜೋಪಾನಾಗಿಲ್ಲ*
*ಈ ಭೂಮಿ ಅನ್ನ ಉಂಡ ಬಳಿಕ ಚೈತನ್ಯ ಬಂದು ಈ ದೇಹಕ।*
*ರಾಮನಾತಕ ಮೂಲ ಗರ್ಭಕ ಆ ಮೇಲೆ ಗಂಡ ಬಂದು ಹೆಣ್ಣು ಕೂಡೀರಬೇಕ।ಜೀ.ಜಿ।*

*ನಿಮ್ಮ ದೇವ ದೇವತೇರಾ ಹುಟ್ಯಾರ ಇದೇ ಭೂಮಿ ಮ್ಯಾಲ।*
*ಹುಟ್ಟಿದ ಶರಣರೆಲ್ಲಾ ಆಗ್ಯಾರ ಇಲ್ಲೆ ಮಣ್ಣ ಪಾಲ।*
*ಎಷ್ಟು ಮಂದಿ ಸತ್ತ ಹೋದರು ಭುಮಿ ಸತ್ತ ಹುಟ್ಟಲ್ಲಾ।*
*ನಾವು ಅಮರ ಎಂದರ ಅನಬೇಕು ತಾವು ದೈವ ದೇವರಿದ್ದ ಬಳಿಕ*
*ಒರಿಗೆ ಹಚ್ಚಿ ವಿಚಾರ ಮಾಡಬೇಕೋ*
*ಇವರ ಗುರುವಿನ ಮಕ್ಕಳು ಆಣಿ ಮಾಡಿ ಹಾಡಬೇಕ।ಜೀ.ಜಿ।*
*ವರು: ಕರ್ನಾಟಕ ಭಾಗ ಮುಳ ಸಾವಳಗಿ ಪ್ರಭಾತ*
*ಸಿಂದಗಿ ತಾಲೂಕ ಕಡಿ ಹಳ್ಳಿಯ ಮ್ಯಾಲಾ*
*ಮತಾಬ ಸಾಹೇಬ ದೇವರಾ ಬೆಂಬಲ್ಲಾ। ಜೀ.ಜಿ।*
*ಪದ ಹಾಕಬೇಕ ಆಧಾರಕ ಹಚ್ಚಿ ಕಡಿತಾರ*
*ಇಟ್ಟು ನೀವು ತರ್ಕಾ।*
*ನೆನಪ ಹಾರಿ ಬಿದ್ದಿತೋ ಪರಾಕ।*
*ಪೇರ ಬಿತ್ತಂದರ ನಿಮ್ಮನ ಬೇವಿ ಮರಕಾ।ಜೀ.ಜಿ।*
*ಕೂಕಪಲ: ಕವಿ ಮಡಿವಾಳನ ಪ್ರಾಸ ಪದಗಳು ಅಳದೋಯಿರಿ ಬಂಡಿತಾ ನಿಮ್ಮ ಎದಿಯಾಗ ಹೊಡೆದಾಂಗ ಗುಂಡೇಲಿ।ಜೀ.ಜೀ। ಚೌಕ–3.* [3]

ಇಲ್ಲಿ ಪುರುಷ ಪ್ರಧಾನ ಸಮಾಜ ತನ್ನ ಅಸ್ತಿತ್ವವನ್ನು ಸಾಬೀತು ಪಡಸಲು ಹೋಗಿ ಮಹಿಳಾ ಅಸ್ತಿತ್ವವನ್ನು ಒಪ್ಪಿಕೊಳ್ಳಬೇಕಾದಂತ ಅಂಶಗಳನ್ನು ಈ ಸಾಹಿತ್ಯದಲ್ಲಿ ಕಂಡುಬರುತ್ತದೆ. ಏಕೆಂದರೆ 'ಭೂಮಿ'ಯೇ ಹೆಣ್ಣು ಅಂದರೆ "ಹೆಣ್ಣು" ಇಲ್ಲದೆ ಯಾವುದೇ ಜೀವ ಇಲ್ಲ ಹೀಗಾಗಿ ಹೆಣ್ಣಿನಿಂದಲೇ ಎಲ್ಲಾ ಹುಟ್ಟು ಪುರುಷನಿಂದಲೇ ಹುಟ್ಟು ಕಾಣಲಿಕ್ಕೆ ಸಾಧ್ಯವಿಲ್ಲ ಎನ್ನುವ ಅನೇಕ ಸಂಗತಿಗಳನ್ನು ಆಧ್ಯಾತ್ಮಿಕ ನೆಲೆಯಲ್ಲಿ ತಿಳಿ ಹೇಳುವ ಸಾಹಿತ್ಯ ಇಲ್ಲಿ ಕಂಡುಬರುತ್ತದೆ.

ಮಹಿಳಾ ಅಸ್ತಿತ್ವದ ಭಾಗವಾದ ಮತ್ತೊಂದು ಸಂಗತಿ ಎಂದರೆ ಪುರುಷ ಸಮಾಜವು ರೂಪಿಸಿರುವ ಹೆಣ್ಣಿನ ಆಶ್ರಯಕ್ಕೆ ಅಥವಾ ನೆರವಿಗೆ ಗಂಡೇ ಇರುತ್ತಾನೆ. ಎನ್ನುವ ಅಂಶಗಳನ್ನು ತಿರಸ್ಕರಿಸುತ್ತಾ ಹೆಣ್ಣಿನಿಂದಲೇ ಎಲ್ಲವನ್ನು ಪಡೆದು ಹೆಣ್ಣಿಗೆ ಮೋಸ ಮಾಡುವ ಈ ಪುರುಷ ಸಮಾಜವನ್ನು ತಿರಸ್ಕಾರ ಮನೋಭಾವದಿಂದ ನೋಡಿದ ಸಾಹಿತ್ಯ ಕಂಡುಬರುತ್ತದೆ. ಇದಕ್ಕೆ 'ಆದ ಗುಣಾ ತಿಳಿದಂತಾ ಶಕ್ತಿ' ಎನ್ನುವ ಶಕ್ತಿ ಪದಾ ದಲ್ಲಿ ಒಂದು ಭಾಗದಲ್ಲಿ ಈ ರೀತಿಯಾಗಿ ದೊರೆಯುತ್ತದೆ.

*"ತಾಯಿ ಮಲಿಯ ಹಾಲ ಕಉಡಿದು ಎಲ್ಲಾರಾಗ್ಯಾರ ದೊಡ್ಡವರಾ।*
*ನನ್ನ ಕಡೆ ತಪ್ಪ ಇದ್ದರ ಹೇಳಿರಿ ಹಿರಿಯರಾ।*
*ನಾ ಹೆಂಗಸ ಮೊದಲೆ ಎಡದಾರ ಇಲ್ಲದ ಮುಡದಾರ।*
*ದೈವಕ ಮಾಡುವೆ ನಮಸ್ಕಾರ।*
*ನನಗೆ ಆಸರಿಲ್ಲ ಯಾರ್‍ಯಾರ।*
*ರಂಬಿಸಿ ತಂದು ಕುತಗಿ ಕೊಯ್ದಿರೋ ತಾಯಿ ಗಂಡಾರ ।ಜೀ.ಜೀ।*
*ವರ: ಭುಮಿ ಹಸರ ಆದಮ್ಯಾಲ ಮೊಲಾ ಅಂತದೋ ಇನ್ನ ಅಂಜಕಿ ಯಾರ್‍ದೇನೋ*
*ನನ್ ಜಲ್ಮಕ ನಾ ಶ್ರೇಷ್ಠನೋ*
*ಕೂಡಪಲ: ಆರ ಗುಣಾ ಅಳಿದಂತಾ ಶಕ್ತಿಗೆ ಮಾನ ಕಳಿತಿದಿಯೇನೋ।ಜೀ.ಜೀ।* [4]

ಹೀಗೆ ಮುಂದುವರೆದು ಮಹಿಳಾ ಅಸ್ತಿತ್ವವನ್ನೇ ನಿರಾಕರಿಸಿ ಮಾತನಾಡುವ ಪುರುಷ ಸಮಾಜಕ್ಕೆ ಸವಾಲು ಹಾಕುತಲೇ ಸಾಹಿತ್ಯ ಮುಂದುವರೆಯುತ್ತದೆ. ಪುರುಷ ಶ್ರೇಷ್ಠ ಪುರಷನಿಂದಲೇ ಜೀವ, ಜೀವನ ಎನ್ನುವ ಅನೇಕ ಸಂಗತಿಗಳಿಗೆ ನಾಗೇಶಿ–ಸಾಹಿತ್ಯ ಮಹಿಳಾ ಅಸ್ತಿತ್ವವನ್ನೇ ಮುಂದಿಟ್ಟುಕೊಂಡು ಪ್ರತಿಯೊಂದಕ್ಕೂ ಆಕಾರ ಕೊಡುವುದರ ಜೊತೆಗೆ ಸಮರ್ಥನೆ ಮಾಡಕೊಳ್ಳುವ ಅನೇಕ ಸಂಗತಿಗಳು ನಾಗೇಶಿ–ಸಾಹಿತ್ಯದಲ್ಲಿ ಕಂಡುಬರುತ್ತವೆ.

ಮಹಿಳಾ ಅಸ್ತಿತ್ವವನ್ನು ಸಾಬೀತು ಪಡಿಸಲು ಜೈವಿಕ ಅಂಶಗಳು ಹಾಗೂ ಜೈವಿಕ ಪ್ರಕ್ರೀಯೆಗಳನ್ನು ಕುರಿತು ವಿವರಿಸಿ ಕೊಡುವ ಸಾಹಿತ್ಯ ದೊರೆಯುತ್ತದೆ. ಇದಕ್ಕೆ 'ತಗೋ ಉತ್ತರ ಇಳಿಸು ನಿನ್ನ ತುರಾಯಿ' ಎನ್ನುವ ನಾಗೇಶಿ–ಸಾಹಿತ್ಯದಲ್ಲಿ ಹೀಗೆ ದೊರೆಯುತ್ತದೆ.

*"ತಗೋ ಉತ್ತರ ಇಳಿಸು ನಿನ್ನ ತುರಾಯಿ ಮಾತ ಆದ ಜರಾ*
*ಹಾಡತೀದಿ ದರಾ ಇದೇ ದರತಿ।*
*ಹ್ಯಾಂಗ ಮಾಸ ಮಾಡ್ಲಿ ನಾ ಈಗ ತಾಯಿಯಂತಿ ।ಜೀ.ಜೀ। ಪಲ್ಲ*
*ಆಗ ಒಬ್ಬನೇ ಇದ್ದ ನಿಮ್ಮ ತಂದಿ, ಇದ್ದಿದಿಲ್ಲ ಮಂದಿ*
*ಆವಾಗ ನಾ ಹೊಂದಿ ಇದ್ದೆ ಗರತಿ।*
*ಒಂದು ತತಿಯೋಳು ನಾವು ಆದೇವು ಉತ್ಪತ್ತಿ ।ಜೀ.ಜೀ।*
*ನಿಮ್ಮ ತಂದೀದು ನಾ ಐದೇಸಿ ಮಾಡಿದೇನು ಬೇಸಿ*
*ನೋಡ ಹರದಾಸ ದರಯೊತ್ತಿ।*
*ನಿಮ್ಮ ಸಾಂಬ ಇಟ್ಟ ನನ್ನ ಹೆಸರ ಆದಿಶಕ್ತಿ।ಜೀ.ಜೀ।*
*ಮಲಿಹಾಲ ಕುಡಿದೇನು ದೊಡ್ಡವಾದ ತಾನು ಎಲ್ಲಿ ಇದ್ದೀ ನೀನು ಮನುಷಜಾತಿ।*
*ಆಕಾರಕ ಬಂದಮ್ಯಾಲ ಆಗೀನಿ ನಿನ್ನ ಹೆಂಡ್ತಿ ।ಜೀ.ಜೀ।*
*ಇಳುವು: ನಿಮ್ಮ ತಂದಿ ನಿಶ್ಚಾ ಮಾಡಿ ನನಗ ಆದ ಲಗ್ಗುಣಾ*
*ನಾ ತಂದ ಹಚ್ಚಿದ ಅರಿಶಿಷಿಣಾ।*
*ತಾ ತಂದ ಕರಿಮಣಿ ಇದು ಮಾತ ಹಾರಣ್ಣ।*
*ಬಾಸಿಂಗ ತುರಾಯಿ ನಂದಣಾ।*
*ತಾ ಇಟ್ಟ ಬಳಿ ಕಾಲುಂಗುರ ಕುಂಕುಮ ಕೂನಾ।*
*ಇವೆಲ್ಲ ನನ್ನ ಸಮಾನ*
*ತನ್ನ ಸೀರಿ ಕುಪ್ಪಸ ತಂದು ನನಗ ಉಡಿಸಿದಾಗ*
*ಕಟ್ಟಿಕೊಂಡ ನನ್ನ ಕಂಕಣಾ॥*
*ವರು ಜರತದ ಶಲ್ಲೆ ಮುಂಡಾಸ ನನಲ್ಲಿ ಅಂವ ಖಾಸ ಕುಂತಾನ*
*ಹರದಾಸಿ ತಲಿಗೆ ಸುತ್ತಿ।*
*ಕೂಡಪಲ್ಲ: ಹ್ಯಾಂಗ ಮಾಪ ಮಾಡ್ಲಿ ನಾ ಈಗ ತಾಯಿಯಂತೆ ।ಜೀ.ಜೀ। ಚೌಕ–1*
*ನಾ ಮೈ ನೆರೆದಿದ್ದೇನೆ ಆಗ ಗೊತ್ತಿಲ್ಲ ತನಗ ನಿನ್ನ ಹಡದವಂಗ ಏನು ಸುದ್ದಿ*
*ಉಂಡೊಂಡು ಮನಿಕೊಂಡು ಮಾಡುತ್ತಿದ್ದ ನಿದ್ದಿ ॥*
*ಆಗ ತೊಟ್ಟ ಶಕ್ತಿ ಅವತಾರ ಬಿಟ್ಟಾ ಕಾಮಾತುರಾ*

*ಎಳದೀತೊ ಭಾರ ಒಳಗ ಬಿದ್ದಿ।*

*ಆ ಬಿಂದು ಹಿಡಿದ ನಾ ಮಾಡಿಕೊಂಡೇನು ಮುದ್ದಿ।ಜೀ.ಜೀ।*

*ಬಿಂದು ಇಲಗಿ ಆರಿಗೋ ಕಂದಾ ಮಾಂಸದ ತುಡಾಂಗ ಬೆಳದೀಗಿ।*

*ದಿನ ದಿನಕ ಲಿಪ್ತವಾಗಿ।*

*ಮೂವತ್ತು ದಿವಸದ ಮ್ಯಾಲೋ ಕೇಳು ಸುದ್ದಿ।ಜೀ.ಜಿ।*

*ಮಾಂಸದ ಕರಣಿ ಐದಿ ಮಳಕೆ ಆದವ್ರೋ*

*ಕೈಕಾಲು ಕಿವಿ,ಮೂಗು, ಎರಡ ತಿಂಗಳಿಗಾದವ್ರೋ*

*ನೀ ಓದಿ ನೋಡು ವೇದವ್ರೋ॥*

*ಮತ್ತ ಮೂರು ತಿಂಗಳಿಗೆ ಬೆರಳುಗರವು ಬೆಳೆದವ್ರೋ।*

*ಚರ್ಮ ಆಸ್ತಿ ರೋಮಗಳರವ್ರೋ॥*

*ಮತ್ತೆ ನಾಲ್ಕು ತಿಂಗಳಿಗೆ ಪಿಂಡಕ ತುಂಬಿತೋ ಜೀವ್ರೋ*

*ಚೈತನ್ಯ ಆಯ್ತೋ ಬಿಂಬವ್ರೋ*

*ಏರು: ಒಂಬತ್ತು ತಿಂಗಳಾದ ಮ್ಯಾಲ ಕೇಳೋ ಕುಲಾಲ ಎದ್ದಾವ್ರೋ*

*ಗೂಲ ಆಯ್ತೋ ಶರತಿ।*

*ಕೂಡಪಲ್ಲ: ಹ್ಯಾಂಗ ಮಾಸ ಮಾಡ್ಲಿ ನಾ ಈಗ ತಾಯಿಯಂತೆ ।ಜೀ.ಜೀ। ಚೌಕ–2*

*ಪ್ರಸೂತಿ ಗಾಳ ಇಲಅಷ್ಟರಾಗ ಬೀಸಿತೋ ಒಳಗ ಪಿಂಡ ಬಿತ್ತೋ ತೆಳಗ ಗರ್ಭದಿಂದ ।*

*ಭೂಮಿಗೆ ಜನಿಸಿ ಬಂದ್ಯೋ ಮೋಹದ ಕಂದಾ। ಜೀ.ಜೀ।*

*ಇಷ್ಟು ಮಾಡಿ ಹೋದ ನಿಮ್ಮ ಜನಕ ತೀಳಿಯಲಿಲ್ಲ ಶುನಕ।*

*ಖಾತ್ರ ನನ್ನ ಮನದ ಆಯ್ತೋ ಮುಂದ*

*ನಿನ್ನ ಜೊತಿ ಜಗತ್ತ ನಾ ಮಾಡುದ್ಕ ಹಚ್ಚೀರಿ*

*ಮನುಷ್ಯನ ಜಲ್ಮಕ ಬಂದು ಬಿದ್ದ ನಿಮ್ಮ ತಂದಿ ಸತಿಗೆ ಹೊಂದಿ ನಡೆಯೋ ಮುಂದ।*

*ಗುರಭೋಧ ತಗಳೋ ಇಂಗಳಿಗಿಗೆ ಬಂದಾ । ಜೀ.ಜೀ।*

*ಹರದಾಸಂದು ಬಿದ್ದಿತೋ ಹೆಣಾ।*

*ಮಹಮ್ಮದ ಇಮಾಮಶಾ ಮಾಡತಾಖು ಗಾಯನ।*

*ಹಚ್ಯಾರ ಹಸರ ನಿಶಾನ।*

*ಕಾಲು ನಬಿ ಹಾಡಿಕೇರಿ ಕಸಗೊಂಡಾರ ನಿಶಿಯಾನಾ।*

*ಖಾಸಿಮರ ಸೂರು ತುಂತಾನ।*

*ವರು: ಚಾಂದ ಹುಸೇನಿ ಇಬ್ಬರು ಜೋಡಿ ಇರದು ಬಾಗೋಡಿ*

*ಹರದಾಸರಿಗೆ ನೋಡಿ ಹಾಕ್ಯಾರೋ ಲತ್ತಿ।*

*ಕೂಡಪಲ್ಲ: ಹ್ಯಾಂಗ ಮಾಸ ಮಾಡ್ಲಿ ನಾ ಈಗ ತಾಯಿಯಂತಿ । ಜೀ.ಜೀ। ಚೌಕ–3* [5]

ಗಂಡನಿಂದಲೇ ಸೃಷ್ಟಿ ಗಂಡಿನ ಮೂಲಕ ಮಹಿಳಾ ಅಸ್ತಿತ್ವವನ್ನು ಗುರುತಿಸ ಬೇಕು ಎಂದು ಹೇಳುವ ಪುರುಷ ಪ್ರಧಾನತೆಗೆ ಮಹಿಳೆಯ ಜೈವಿಕ ಪ್ರಕ್ರೀಯೆಗಳನ್ನು ಧರಿಸಿ ಉತ್ತರ ನೀಡುವುದು ಇಲ್ಲಿ ಕಂಡುಬರುತ್ತವೆ.

ಪುರುಷ ಎನ್ನಿಸಿಕೊಂಡ ಜೀವಿಯ ಹೆಣ್ಣಿನಿಂದಲೆ ಹುಟ್ಟುವುದರಿಂದ ಸ್ತ್ರೀವಾದಿ ಚಿಂತಕಿ 'ಸಿಮಾನ್ ಬೋವಾ' ಸ್ತ್ರೀಯ ಗರ್ಭಕೋಶದ ಬಗ್ಗೆ ತಿಳುವಳಿಕೆಯನ್ನು ನಾಗರೀಕ ಸಮಾಜ ಹೊಂದಾಗಿದೆ. ಇದರಿಂದ ಮಹಿಳೆಗೆ ಸ್ವತಂತ್ರದ ಅಸ್ತಿತ್ವ ದೊರಕಲು ನಾಶ್ಯಾ ಎನ್ನುವ ಸಂಗತಿಗಳ ಕುರಿತು ಹೇಳುವುದು ಕಂಡುಬರುತ್ತದೆ. ಸ್ತ್ರೀವಾದವು ಪುರುಷ ಪ್ರಧಾನತೆ ಲಿಂಗರಾಜಕಾರಣವನ್ನು ಭೇದಿಸಿ ಮಹಿಳೆಗೆ ಇರುವ ಸಂತಾನೋತ್ಪತ್ತಿ ಸಾಮರ್ಥ್ಯದ ಕುರಿತು ವಿವರಿಸುವುದು ಕಂಡುಬರುತ್ತದೆ. ಇದಕ್ಕೆ "ಹೆಣ್ಣು ಹೆಣ್ಣಾದ ಹಂತದಿಂದ ಅವಳ ಆ ಋತುಚಕ್ರವು ನಿಲ್ಲುವ ಹಂತದವರೆಗೆ ಅವಳ ದೇಹವು ಸೃಷ್ಠಿ ಕ್ರೀಯೆಯ ಮಹಾಶಕ್ತಿ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತದೆ. ಪ್ರಕೃತಿಯು ಹೆಣ್ಣಿನ ದೇಹವನ್ನು ತನ್ನ ಕಾರ್ಯಾಗಾರವಾಗಿ ಆಯ್ಕೆ ಮಾಡಿಕೊಂಡಿದೆ ಎಂಬ ಸಂಗತಿ ಅವಳ ಪಾಲಿನ ಹೆಮ್ಮೆ ಎನಿಸಿ, ಸಾಮಾಜಿಕ ಗೌರವಗಳು ಸಲ್ಲ ಬೇಕಾದ ಸಂಧರ್ಬವೆನಸಬೇಕು"[6] ಹೀಗೆ ಹೆಣ್ಣಿನ ಜೈವಿಕ ಸಾಮರ್ಥ್ಯಗಳು ಮಹಿಳಾ ಅಸ್ತಿತ್ವದ ನೆಲೆಯಲ್ಲಿ ಅವಳ ಪಾಲಿನ ಹೆಮ್ಮೆ ಗೌರವ ನೆಲೆಯಲ್ಲಿ ಇರಬೇಕೆಂದು ಸ್ತ್ರೀವಾದವು ವಾದಿಸುವ ಅಂಶಗಳಿಂದ ಇಲ್ಲಿ ನಾಗೇಶಿ–ಸಾಹಿತ್ಯವು ಕೂಡಾ ಹೆಣ್ಣಿನ ಜೈವಿಕ ಸಹಜ ಪ್ರಕ್ರೀಯೆಗಳನ್ನು ಹೇಳುತ್ತವೆ. ತನ್ನ ಅಸ್ತಿತ್ವವನ್ನು ಪ್ರಸ್ತುತ ಪಡಿಸುವುದು ಕಂಡುಬರುತ್ತದೆ. ನಾಗೇಶಿ–ಸಾಹಿತ್ಯ ಹೆಣ್ಣಿನ ಜೈವಿಕ ಸಂಗತಿಗಳ ಮೂಲಕ ತನ್ನ ಅಸ್ತಿತ್ವವನ್ನು ಸಾರಲು ಹೊರಟಿರುವ ಕಾರಣವೇನೆಂದರೆ ಕೇವಲ ಗಂಡು ಸಂತಾನ ಕ್ರೀಯೆ ಕಾರಣನಾಗುತ್ತಾನೆ ಹೊರತು ಉಳಿದೆಲ್ಲಾ ಸಂತಾನ ಪ್ರಕ್ರೀಯೆಯಲ್ಲಿ ಅಂದರೆ 'ಮಗು'ವಾಗಿಸುವ 'ಶಕ್ತಿ'ಇರುವುದು ಮಾತ್ರ ಹೆಣ್ಣಿನ ಗರ್ಭಾಶಯಕ್ಕೆ ಮಾತ್ರನೆ ಈ ಆಧುನಿಕ ತಂತ್ರಜ್ಞಾನದಲ್ಲೂ ಪುರುಷನ ಭಾಗವಹಿಸುವಿಕೆ ನೇರವಾಗಿ ಇಲ್ಲದೆಯೆ ಅವನಿಂದ ಸಂಗ್ರಹಿಸಿದ 'ಅಂಶ'ವನ್ನಷ್ಟೇ ಬಳಸಿ ಮಗುವಿನ ಸೃಷ್ಠಿ ಸಾಧ್ಯ ವೆನಿಸಿಬಿಟ್ಟಿದೆ ಆದರೆ ಗರ್ಭಾಶಯದ ಮಹತ್ವದ ಪಾತ್ರಕ್ಕೆ ಪರ್ಯಾಯ ವ್ಯವಸ್ಥೆ ಇನ್ನೂವರೆಗೂ ಬಂದಿಲ್ಲ. ಹೀಗಾಗಿ ಮಹಿಳಾ ಅಸ್ತಿತ್ವವು ಅವಳ ಜೈವಿಕ ಅಂಶಗಳಿದ್ದರೂ ಗುರುತಿಸಬೇಕಾದದೂ ಇದೆ ಎಂದು ಸಾರುವ ಸಾಹಿತ್ಯ ನಾಗೇಶಿ ಪಕ್ಷದವರಿಂದ ಕಂಡು ಬರುತ್ತದೆ.

**ಉಪಸಂಹಾರ**

ಒಂದು ಜೀವ ಉತ್ಪಾದನೆಯಲ್ಲಿ ಹೆಣ್ಣಿನ ಗರ್ಭಾಶಯವೇ ಅಂತಿಮ ಗರ್ಭಾಶಯ ಇಲ್ಲದೆ ಹೋದರೆ, ಜೀವ ಸೃಷ್ಠಿಗೊಳ್ಳಲು ಸಾಧ್ಯವಿಲ್ಲ. ಇಂತಹ ಜೀವ ಸೃಷ್ಠಿಸುವ ಶಕ್ತಿಯ ಅಸ್ತಿತ್ವವನ್ನು ನಿರಾಕರಿಸುವ ಈ ಪುರುಷ ಸಮಾಜಕ್ಕೆ ತಿಳಿಹೇಳುವುದರ ಮೂಲಕ ಮಹಿಳಾ ಶಕ್ತಿ ಕೇಂದ್ರವಾದ ಗರ್ಭಾಶಯದ ಪ್ರಖರತೆಯನ್ನು ಪುರುಷ ಸಮಾಜಕ್ಕೆ ಪರಿಚಯಿಸುವ ಕೆಲಸ ಇಲ್ಲಿ ಕಂಡುಬರುತ್ತದೆ. ಮುಂದುವರೆದು ಪ್ರತಿಯೊಂದು ಜೀವವು ಗರ್ಭಾಶಯದ ಶಕ್ತಿಯ ಕಾರಣಕ್ಕಾಗಿಯೇ ಸಾಕಾರಗೊಂಡಿದ್ದು ಎಂಬ ಸತ್ಯವಂತೂ ನಿರಾಕರಿಸಬಾರದು, ಈ ಸತ್ಯವನ್ನು ಮನ್ನಿಸಿ ಗೌರವಿಸುವುದು ಸಹಜ ಧರ್ಮದ ಭಾಗವಾಗಬೇಕು. ಸ್ತ್ರೀಶಕ್ತಿ ಕೇಂದ್ರವು ಮಾನವ ಜನಾಂಗದ ಸಂಗೋಪನೆಗಳನ್ನು ವಹಿಸಿಕೊಂಡಿರುವ ಪ್ರೀತಿಯ ಕೇಂದ್ರ, ಹಕ್ಕು, ಒಡೆತನ, ನಿಯಂತ್ರಣಗಳ ದಬ್ಬಾಳಿಕೆಯೆ ಈ ಕೇಂದ್ರದಲ್ಲಿ ಸ್ಥಾನವಿಲ್ಲ ತನ್ನ ಶಕ್ತಿಯನ್ನು ಒಂದು ಜೀವಕ್ಕೆ ಧಾರೆಯೆರೆದ ಮೇಲೆ ಆ ಶಕ್ತಿಯ ಮೇಲೆ ದಬ್ಬಾಳಿಕೆ, ತಾರತಮ್ಯ, ಅನ್ಯಾಯವೆಸಗಬಾರದು ಎಂದು ಹೇಳುವ ತಾತ್ವಿಕ ಮತ್ತು ಆಧ್ಯಾತ್ಮಿಕ ನೆಲೆಯಲ್ಲಿ ಹೇಳುತ್ತಾ ಮಹಿಳಾ ಅಸ್ತಿತ್ವದ ನೆಲೆಯನ್ನು ಸ್ಥಾಪಿಸುವ ಕೆಲಸ ನಡೆದಿರುವುದು ಕಂಡುಬರುತ್ತದೆ.

**ಕೊನೆ ಟಿಪ್ಪಣೆ:**

1. ನಿಜಲಿಂಗಪ್ಪ ಮಟ್ಟಿಹಾಳ. (2001). ಬಿಜಾಪುರ ಜಿಲ್ಲೆಯ ಲಾವಣಿ ಮೇಳಗಳು. ಪು.ಸಂ. 69

2. ಮೇಲಿನದೆ. ಪು.ಸಂ. 132
3. ಬಿರಾದಾರ ಎಂ.ಜಿ. ಮತ್ತು ಬಿ.ಎಸ್.ಕೋಟ್ಯಾಳ (ಸಂ.). (2014). ಬೀಬೀ ಇಂಗಳಿಗಿ ಪರಿಸರದ ಗೀಗೀ ಪದಗಳು– ಸಂಪುಟ 2. ಪು.ಸಂ. 136
4. ಬಿರಾದಾರ ಎಂ.ಜಿ. ಮತ್ತು ಬಿ.ಎಸ್.ಕೋಟ್ಯಾಳ (ಸಂ.). (2014). ಪೂರ್ವೋಕ್ತ., ಪು.ಸಂ.149
5. ಮೇಲಿನದೇ., ಪು.ಸಂ.101
6. ಶ್ರೀಮತಿ ಹೆಚ್.ಎಸ್. (2004). ಹೆಣ್ಣು–ಹೆಂಗಸು. ಪು.ಸಂ. 69

**ಪರಾಮರ್ಶನ ಗ್ರಂಥಗಳು**


- ಅಶೋಕ ನರೋಡೆ. (2004). ಉತ್ತರ ಕರ್ನಾಟಕದ ಪ್ರಸಿದ್ಧ ಗೀಗಿ ಮೇಳಗಳು. ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಬಿರಾದಾರ ಎಂಜಿ. ಕೋಟ್ಯಾಳ ಬಿ.ಎಸ್. (2014). ಬೀಬಿ ಇಂಗಳಗಿ ಹಸನ ಸಾಹೇಬನ ಗೀಗಿ ಪದಗಳು– ಸಂಪುಟ 1 ಮತ್ತು 2, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು
- ಬಿರಾದಾರ ಎಂಜಿ. ಕೋಟ್ಯಾಳ ಬಿ.ಎಸ್. (2014). ಕೃಷ್ಣಾ ತೀರದ ಗೀಗಿ ಪದಗಳು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
- ಬಿರಾದಾರ ಎಂಜಿ. ಕೋಟ್ಯಾಳ ಬಿ.ಎಸ್. (2014). ಗೂಡಾಲಾಲ ಮತ್ತು ಕಲಪ್ಪ ಅವರ ಗೀಗಿ ಪದಗಳು, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.
- ಹರಿಶ್ಚಂದ್ರ ದಿಗ್ಗಿಂಗಿರ್. (2005). ಲಾವಣಿ ಸವಾಲ–ಜವಾಬ್ ಪದಗಳು. ಪ್ರಸಾರಾಂಗ ಕನ್ನಡ ವಿವಿ, ಹಂಪಿ.
- ಕೊಟ್ಯಾಳ ಬಿಎಸ್. (1995). ಬೀಬಿ ಇಂಗಳಗಿ ಸಂಪ್ರದಾಯದ ಗೀಗಿ ಪದಗಳು, ವಿದ್ಯಾನಿಧಿ ಪ್ರಕಾಶನ, ಗದಗ.
- ಮೃತ್ಯುಂಜಯ ಹೊಕೇರಿ (ಸಂ.). (2009). ಗೀಗಿ ಪದಗಳು (ಭಾಗ–1 ಮತ್ತು 2. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
- ಶೈಲಜಾ ಹಿರೇಮಠ. (2011). ಹರದೇಶಿ–ನಾಗೇಶಿ ಕಲೆ ಮತ್ತು ಕಲಾವಿದರು: ಲಿಂಗ ಸಂಬಂಧಿ ಅಧ್ಯಯನ. ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.